5.	V. Pram Power Company Kukkarahalli, 2nd Main Road, Mysore - 570009.	Devaraya Anicut	0.50	DE 28 NCE 96(25) Dated 24-7-1996
6.	Graphite Inida Limited, Visveswaraya Indl. Area White Field Road, Bangalore - 48.	Link Canal	1.50	DE 84 PPC 92 Date 20-7-1992
7.	L.K. Power Corporation Ltd., Breway House, 7th Mile, Kanakapura Road, Bangalore-62.	Maddur	2.00	PWD 148 PPC 89(3) Dated 14-3-1990
8.	Matha Hydro Power Tech. Ltd., SourabhaM 4th Cross, ANR Road, Shimogha-577201.	Lokasara	0.25	DE 54 NCE 99(3) Dated 9-7-1999
9.	Kilara Power Pvt. Ltd., 204/C, 6th Main, 27nd Cross, Jayanagar 3rd Block	45th Km of Maddur Branch Canal	0.45	DE 54 NCE 99(6) Dated 9-7-199
10.	Trishul Power (P) Ltd., No. 4269, Railway Parallel Road, Rajajinagar 2nd Stage, Subramanyanagar Bangalore - 560 021.	Himagiri Anicut	1.00	DE 54 NCE 99 Dated 1-4-2000
11.	Kilara Power Pvt. Ltd., 204/C, 6th Main, 27th Cross, Jayanagar 3rd Block, Bangalore-11	26th Km of Maddur Branch Canal	0.50	DE 54 NCE 99 Date 1-4-2000
12.	Atria Hydel Power Ltd., No.1/1, Palace Road, Bangalore - 560 001.	Brindavan	12.00	DE 54 NCE 99(8) Dated 9-7-1999
		Total	26.55	

ಸರ್ಕಾರದ ವಿದ್ಯುತ್ ಕಾರ್ಖಾನೆಯ ನಷ್ಟ ಅನುಭವಿಸುತ್ತಿರುವ ಬಗ್ಗೆ

2797 (3546) ಶ್ರೀ ಅಶೋಕ್ .ಆರ್ (ಉತ್ತರಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಕಾರ್ಖಾನೆಯು ನಷ್ಟವನ್ನು ಅನುಭವಿಸುತ್ತಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಅನುಭವಿಸಿರುವ ನಷ್ಟದ ಪ್ರಮಾಣ ಎಷ್ಟು; ಹಾಗೂ ಈ ನಷ್ಟಕ್ಕೆ ಕಾರಣಗಳೇನು;

ಇ) ಈ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಈ) ಈ ಕಾರ್ಖಾನೆಯಲ್ಲಿ ತಯಾರಿಸಿರುವ ವಿದ್ಯುತ್ ಉಪಕರಣಗಳ ಮಾರುಕಟ್ಟೆಯನ್ನು ಉತ್ತಮಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) :ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರ ಪರವಾಗಿ

ಅ) ಇಲ್ಲ

ಆ) ಸದರಿ ಕಂಪನಿಯು 1997-98 ಮತ್ತು 1998-99ರಲ್ಲಿ ಕ್ರಮವಾಗಿ ರೂ. 342.43 ಹಾಗೂ 365.65 ಲಕ್ಷಗಳಷ್ಟು ಮಾತ್ರ ನಷ್ಟವನ್ನು ಅನುಭವಿಸಿದೆ. ಇದಕ್ಕೆ ಕಾರಣಗಳು ಕೆಳಗಿನಂತಿವೆ:

1) ಪರಿವರ್ತಕಗಳ ಬೇಡಿಕೆ ಕಡಿಮೆಯಾಗಿದ್ದುದು.

2) ಪರಿವರ್ತಕಗಳಿಗೆ ಕಡಿಮೆ ಬೆಲೆ ನೀಡಿರುವುದು.

3) ಕೆಪಿಟಿಸಿಎಲ್ ಬೆಲೆ ಆಧ್ಯತೆ ನೀಡದಿದ್ದುದು.

ಇ) ಪ್ರಶ್ನೆಯು ಉದ್ಭವಿಸುವುದಿಲ್ಲ

ಈ) ಕಾರ್ಖಾನೆಯು ಸಧ್ಯದಲ್ಲಿ ತನ್ನ ಉಪಕರಣಗಳನ್ನು ಕೆ.ಪಿ.ಟಿ.ಸಿ.ಎಲ್.ಗೆ ಅದರ ಬೇಡಿಕೆಯನುಸಾರ ಸರಬರಾಜು ಮಾಡುತ್ತದೆ. ತನ್ನ ಉತ್ಪಾದಕತೆಯ ಗುಣಮಟ್ಟವನ್ನು ಪೂರೈಸಲು ಕಾರ್ಯನಿರತವಾಗಿ ಜೂನ್ 30, 2000 ರಂದು ಅಂತರ್‌ರಾಷ್ಟ್ರೀಯ ಗುಣಮಟ್ಟದ ಐ.ಎಸ್.ಒ. 9002 ಪ್ರಮಾಣ ಪತ್ರಪಡೆದಿದೆ. ಪ್ರಸ್ತುತ ಅಂತರ್‌ರಾಷ್ಟ್ರೀಯ ಗುಣಮಟ್ಟದ ಐ.ಎಸ್.ಒ. 9001 (ವಿನ್ಯಾಸಕ್ಕೆ ಸಂಬಂಧ ಪಟ್ಟಂತೆ) ಮತ್ತು ಐ.ಎಸ್.ಒ. 14001 (ಪರಿಸರಕ್ಕೆ) ಸಂಬಂಧಪಟ್ಟಂತೆ) ಪ್ರಮಾಣ ಪತ್ರಗಳನ್ನು ಗಳಿಸಲು ಕಾರ್ಯನಿರತವಾಗಿದೆ. ಇದಲ್ಲದೆ ವೆಚ್ಚವನ್ನು ತಗ್ಗಿಸಲು ಕಾರ್ಖಾನೆಯಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಎನ್.ಜಿ.ಇ.ಎಫ್ ಕಾರ್ಖಾನೆಯು ನಷ್ಟದಲ್ಲಿರುವ ಬಗ್ಗೆ

2798 (3848) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇದುವರೆವಿಗೂ ಎನ್.ಜಿ.ಇ.ಎಫ್. ಕಾರ್ಖಾನೆಯಿಂದಾಗಿರುವ ನಷ್ಟದ ಮೊತ್ತ ಎಷ್ಟು;

ಆ) ನಷ್ಟದಲ್ಲಿರುವ ಕಾರ್ಖಾನೆಯನ್ನು ಪುನ:ಶ್ಚೇತನಕ್ಕಾಗಿ ನೇಮಕ ಮಾಡಲಾಗಿದ್ದ ಸಮಿತಿಗಳು ಯಾವುವು, ಸಮಿತಿಗಳ ವರದಿ ಏನು ಅವುಗಳನ್ನು ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡಿರುವ ತೀರ್ಮಾನವೇನು;

ಇ) ನಷ್ಟದಲ್ಲಿರುವ ಈ ಕಾರ್ಖಾನೆಯನ್ನು ಸರ್ಕಾರ ಖಾಸಗೀಕರಣಗೊಳಿಸಲು ತೀರ್ಮಾನಿಸಿದೆಯೇ; ಇಲ್ಲದಿದ್ದಲ್ಲಿ ಇದರ ಪುನ:ಶ್ಚೇತನಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಯೋಜನೆಗಳಾವುವು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ಇಲಾಖೆ ಸಚಿವರು) : ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರ ಪರವಾಗಿ

ಅ) ಎನ್.ಜಿ.ಇ.ಎಫ್. ಕಾರ್ಖಾನೆಗೆ ದಿನಾಂಕ 31-3-2000ರ ವರೆಗೆ ಆಗಿರುವ ಒಟ್ಟು ನಷ್ಟ ರೂ. 222.90 ಕೋಟಿಗಳು.